ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, (ಜಾರಿ) ಉತ್ತರ ವಲಯ, ಕ್ಲಬ್ ರಸ್ತೆ 'ಸುಮೌಲ್ಯ ಸೌಧ' 4ನೇ ಮಹಡಿ ಬೆಳಗಾವಿ.

Office of the Commissioner of Commercial Taxes, Bangalore-9
6 NOV 2013
Gen.No. ACCT(Gen)

ಸಂ:ವಾ.ಶಾ/ಸಿಆರ್-06/2012-13/ಬಿ- 1796 ದಿನಾಂಕ: 22-10-2013

## ಅಧಿಸೂಚನೆ

ವಿಷಯ: ಈ ಕಚೇರಿಯ ಹಳೆಯ ಒಂದು ವಾಹನವನ್ನು ಬಹಿರಂಗ ಹರಾಜು ಮಾಡುವ ಕುರಿತು.

ಉಲ್ಲೇಖ:- 1) ಪ್ರಾ.ಸಾ.ಅ. ಅವರ ಕಚೇರಿಯ ಪತ್ರ ಸಂ:ಪ್ರಾ.ಸಾ.ಅ/ಕೆಎ-22-ಜಿ-187/12-13 ದಿನಾಂಕ 05-04-2013

2) ಈ ಕಚೇರಿಯ ಪತ್ರ ಸಂ:ವಾತೆಜಂಅ/(ಜಾರಿ)ವಾಶಾ/2013-14/ಬಿ-938 ದಿನಾಂಕ 23-07-2013

3) ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು, ಬೆಂಗಳೂರ ಅವರ ಪತ್ರ ಸಂಖ್ಯೆ:ಎಹೆಟ್ಟಿ/ಸಿಆರ್-7 2013-14 ದಿನಾಂಕ 07-08-2013

***********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಉತ್ತರ ವಲಯ, ಬೆಳಗಾವಿ ಇವರ ಕಚೇರಿಗೆ ಸಂಬಂಧಿಸಿದ ಹಳಯ ಒಂದು ನಿರುಪಯುಕ್ತ ವಾಹನವನ್ನು ಯಾವ ಸ್ಥಿತಿಯಲ್ಲಿದೆಯೇ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಸದರಿ ವಾಹನವನ್ನು ದಿನಾಂಕ 10-12-2013 ರಂದು ಬೆಳಿಗ್ಗೆ 10-30 ಘಂಟೆಗೆ ಈ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕರ ಕೊಠಡಿಯಲ್ಲಿ ಸಾರ್ವಜನಿಕ ಸಮಕ್ಷಮ ಬಹಿರಂಗ ಹರಾಜು ಮಾಡಲು ನಿಗದಿಪಡಿಸಲಾಗಿದೆ. ಆದ್ದರಿಂದ ಇಚ್ಚೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ, ವಾಹನಗಳನ್ನು ಖರೀದಿಸಬಹುದಾಗಿರುತ್ತದೆ.

### ಹರಾಜಿನ ವಾಹನಗಳ ವಿವರ

| ಅ.ನಂ | ವಾಹನ ಹೆಸರು | ವಾಹನದ ಸಂಖ್ಯೆ | ಮಾಡೆಲ್ | ಚೆಸ್ಸಿ ಸಂಖ್ಯೆ | ಇಂಜನ ಸಂಖ್ಯೆ |
|---|---|---|---|---|---|
| 1 | 2 | 3 | 4 | 5 | 6 |
| 1 | ಟಾಟಾ ಸುಮೋ | ಕೆಎ-22-ಜಿ-187 | 1997 | 385003 ಕೆಎಸಕ್ಯೂ 943262 | 483 ಡಿಎಲ್ 41 ಜಿಎಸಕ್ಯೂ 807453 |

ಈ ಮೇಲ್ಕಂಡ ವಾಹನವನ್ನು ಬಹಿರಂಗ ಹರಾಜಿನಲ್ಲಿ ಬಾಗವಹಿಸುವ ಬಿಡದಾರರು ಈ ಕೆಳಗೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

### ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು

1) ಪ್ರತಿಯೊಬ್ಬ ಬಿಡದಾರರು ವಾಹನಗಳ ಹರಾಜಿನಲ್ಲಿ ಭಾಗವಹಿಸಲು, ಭದ್ರತಾ ಠೇವಣಿ ರೂ.5,000-00 (ರೂ.ಐದು ಸಾವಿರ ರೂಪಾಯಿಗಳು) ಡಿ.ಡಿ ರೂಪದಲ್ಲಿ ಅಥವಾ ನಗದು ರೂಪದಲ್ಲಿ ಬಹಿರಂಗ ಹರಾಜು ನಡೆಯುವ ಸ್ಥಳದಲ್ಲಿ 10-30 ಗಂಟೆಯಿಂದ

12-00 ಗಂಟೆಯೊಳಗೆ ಪಾವತಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. 12-00 ಗಂಟೆಯ ನಂತರ ಬಂದ ಬಿಡದಾರರ ಹೆಸರುಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿಯನ್ನು ಕೊಡಲಾಗುವುದಿಲ್ಲ.

2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ಇವರು ನೇಮಿಸಲ್ಪಟ್ಟ ಅಧಿಕಾರಿಗಳಿಂದ ಬಹಿರಂಗ ಹರಾಜನ್ನು ನಡೆಸಲಾಗುವುದು.ಠೇವಣಿ ಬಿಡದಾರರು ಸವಾಲಿನಲ್ಲಿ ಭಾಗವಹಿಸಲು ಅರ್ಹರಾಗುರುತ್ತಾರೆ.

3) ಬಹಿರಂಗ ಹರಾಜಿಗಿಟ್ಟಿರುವ ಮೇಲೆ ಹೇಳಿದ ವಾಹನಕ್ಕೆ ನಿಗದಿ ಪಡಿಸಿರುವ ಕನಿಷ್ಠ ಬೆಲೆ ರೂ.75000/-. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆಯನ್ನು ದಾಖಲು ಮಾಡಿದ ಬಿಡದಾರನ್ನು ಯಶ್ವಸಿ ಖರೀದಿದಾರರೆಂದು ಪರಿಗಣಿಸಲಾಗುವುದು.

4) ಯಶ್ವಸಿಯಾದ ಬಿಡದಾರರು ವಾಹನದ ಒಟ್ಟು ಬೆಲೆಯ ಶೇ.50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು .ಉಳಿದ ಶೇ.50 ರಷ್ಟು ಹಣವನ್ನು ನಂತರದ ಏಳು ದಿನಗಳೊಳಗಾಗಿ ಪಾವತಿಸುವುದು. ತಪ್ಪಿದಲ್ಲಿ ಮುಂಗಡವಾಗಿ ಕಟ್ಟಿದ ಶೇ.50 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ವಾಹನವನ್ನು ಮರು ಹರಾಜಿನಲ್ಲಿ ಮಾರಾಟ ಮಾಡಲಾಗುವುದು.

5) ಹರಾಜು ಮಾಡಲಾದ ವಾಹನದ ಮೌಲ್ಯಕ್ಕೆ ಚಾಲ್ತಿಯಲ್ಲಿರುವ 'ವ್ಯಾಟ್' ತೆರಿಗೆಯನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು.

6) ಹರಾಜಿನಲ್ಲಿ ಭಾಗವಹಿಸಿದ ಬಿಡದಾರರು ಹರಾಜು ಮುಗಿದ ನಂತರ ಹರಾಜಿನಲ್ಲಿ ಯಶ್ವಸಿಯಾದವರು ಮತ್ತು ಯಶ್ವಸಿಯಾಗದವರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಯಶ್ವಸಿಯಾಗದ ಬಿಡದಾರರಿಗೆ ಭದ್ರತಾ ಠೇವಣಿಯನ್ನು ಸ್ಥಳದಲ್ಲಿ ಹಿಂತಿರುಗಿಸಲಾಗುವುದು.

7) ಹರಾಜನ್ನು ಅಂಗೀಕರಿಸುವ ರದ್ದುಪಡಿಸುವ/ತಿರಸ್ಕರಿಸುವ ಅಧಿಕಾರವನ್ನು ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿರವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾದದ್ದು.

8) ಮೇಲ್ಕಂಡ ಹರಾಜಿನ ಸಂಬಂಧದಲ್ಲಿ ಯಾವುದೇ ವಾದ-ವಿವಾದಗಳು ಉದ್ಭವಿಸಿದಲ್ಲಿ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಉತ್ತರ ವಲಯ, ಬೆಳಗಾವಿ ಅವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.

9) ಹರಾಜು ಮಾಡಲಿರುವ 'ಚಲಿಸುವ ಸ್ಥಿತಿಯಲ್ಲಿರುವ/ನಿರುಪಯುಕ್ತ ಹಳೆಯ ವಾಹನಗಳನ್ನು ಕಚೇರಿ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಛೆಯುಳ್ಳವರು ಕಚೇರಿ ವೇಳೆಯಲ್ಲಿ ಪತ್ರಾಂಕಿತ ವ್ಯವಸ್ಥಾಪಕರನ್ನು ಸಂಪರ್ಕಿಸಿ ಪರಿಶೀಲನೆ ಮಾಡಿ, ಹರಾಜಿನಲ್ಲಿ ಭಾಗವಹಿಸಬಹುದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾರಿ), ಉತ್ತರ ವಲಯ, ಬೆಳಗಾವಿ

ಪ್ರತಿಗಳು:

1) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಮೌಲ್ಯ ತೆರಿಗೆ ವಿಭಾಗ, ಬೆಳಗಾವಿ ಇವರಿಗೆ ಶುಭಾಷಯಗಳೊಂದಿಗೆ, ಅಧಿಸೂಚನೆಯನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.
3) ಮಾನ್ಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಳಗಾವಿ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ವಿನಂತಿಯೊಂದಿಗೆ.
4) ಕಚೇರಿಯ ಪ್ರತಿ.
5) ವಾಣಿಜ್ಯ ತೆರಿಗೆ ಉಪ ಆಯುಕ್ತರು ಇ-ಆಡಳಿತ ವಾಣಿಜ್ಯ ತೆರಿಗೆ ಆಯುಕ್ತರ ಕಚೇರಿ, ಬೆಂಗಳೂರುರವರಿಗೆ ಇಲಾಖೆಯ ಅಂತರ್ಜಾಲ ತಾಣ ctax.kar.nic.in ಮತ್ತು E-Notice Board ಎರಡರಲ್ಲಿಯೂ ಪ್ರಕಟಿಸಲು ಕೋರಿದೆ.